**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1949/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಬಸವರಾಜು | **PW**-4 |
| **ತಂದೆಯ ಹೆಸರು** | : | ಜಯಪ್ಪ | **CW**-4 |
| **ವಯಸ್ಸು** | : | 40 ವರ್ಷ | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಪುಂಡನಹಳ್ಳಿ | |

**ದಿನಾಂಕಃ06-06-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ಸಾಕ್ಷಿಗೆ ನಿಪಿ2 ಮಹಜರ್ ಅನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ2 ಸಿ ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ಯಾವ ಕಾರಣಕ್ಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಯಾವುದೋ ಒಂದು ದಾಖಲಾತಿಗೆ ಸಹಿ ಮಾಡಲು ತಿಳಿಸಿದ್ದು ಅದರಂತೆ ನಾನು ಸಹಿ ಮಾಡಿರುತ್ತೇನೆ.

ನಿಪಿ2 ಮಹಜರ್ ನಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಸಾಕ್ಷಿಗೆ ನಿಪಿ3 ಮತ್ತು 4 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ಎಲ್ಲಿ ಯಾವಾಗ ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಈಗ ನನಗೆ ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: ಮಾನ್ಯ A P P ರವರಿಂದ ::**

ದಿನಾಂಕ 24.07.2023 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಹಾಗೂ ಚಾಸಾ 3 ರವರನ್ನು ಪ್ರಕರಣಕ್ಕೆ ಸಂಬಂಧಪಟ್ಟಂತೆ ಸ್ಥಳ ಮಹಜರ್ ಅನ್ನು

ತಯಾರಿಸುವ ಸಲುವಾಗಿ ಸಾಕ್ಷಿದಾರರನ್ನಾಗಿ ಬರಲು ಕೇಳಿಕೊಂಡಿದ್ದು ಅದರ ಮೇರೆಗೆ ನಾವು ಒಪ್ಪಿ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹಾಗೂ ಚಾಸಾ3 ರವರ ಸಮಕ್ಷಮ ಚಾಸಾ 2 ರವರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಸ್ಥಳ ಮಹಜರ್ ಅನ್ನು ಘಟನಾ ಸ್ಥಳದಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ2 ಮಹಜರ್ ಅನ್ನು ಆ ದಿನ ಮಧ್ಯಾಹ್ನ 02.00 ರಿಂದ 02.30 ಗಂಟೆ ಮಧ್ಯದಲ್ಲಿ ಘಟನಾ ಸ್ಥಳದಲ್ಲಿ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ3 ಮತ್ತು 4 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ2 ರಲ್ಲಿ ಇರುವ ವಿಚಾರಗಳನ್ನು ನನಗೆ ಓದಿ ತಿಳಿಸಿದ ಮೇರೆಗೆ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಈಗ ಆರೋಪಿಯ ಜೊತೆ ಶಾಮಿಲಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿತರ ಪರ ವಕೀಲರಿಂದ ::**

**( ಪಾಟೀ ಸವಾಲು ಇರುವುದಿಲ್ಲ)**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::